ಮಕ್ಕಳು ವಿಭಿನ್ನ ರೀತಿಯಲ್ಲಿ ಕಲಿಯುತ್ತಾರೆ: | ಸಂಗಾರೆಡ್ಡಿಯ ಅನುಭವ

ಆರಂಭಿಕ ಬಾಲ್ಯ ಶಿಕ್ಷಣ ತಂಡ (ಸಂಗಾರೆಡ್ಡಿ)

ಸಮಗ್ರ ಶಿಶು ಅಭಿವೃದ್ಧಿ (Integrated Child Development Services- ICDS) ಯೋಜನೆಯಡಿಯಲ್ಲ ನಡೆಯುತ್ತಿರುವ ಸುಮಾರು 13 ಲಕ್ಷ ಅಂಗನವಾಡಿ ಕೇಂದ್ರ (Anganwadi Centres - AWCs)ಗಳಿಗೆ ಹಾಜರಾಗುವ 3ರಿಂದ 6 ವರ್ಷದೊಳಗಿನ 3.3 ಕೋಟಿ ಮಕ್ಕಳ ಪೈಕಿ ಇಬ್ಬರು–ದೇವಿಕಾ ಮತ್ತು ಬಾಲಾ. ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ ಸಚಿವಾಲಯದ ಐಸಿಡಿಎಸ್ ಯೋಜನೆಯಡಿ ಈ ಕೇಂದ್ರಗಳು ಪೌಷ್ಟಿಕ ಆಹಾರ, ಆರೋಗ್ಯ ಮತ್ತು ಆರಂಭಿಕ ಶಿಕ್ಷಣ ಸೇವೆಯನ್ನು ಒದಗಿಸುತ್ತವೆ. ಮಕ್ಕಳು ಇಲ್ಲಿ ಶಿಕ್ಷಕರು ಹೇಳಿಕೊಡುವ ಆಟ ಮತ್ತು ಅರ್ಥಪೂರ್ಣ ಚಟುವಟಿಕೆಗಳ ಮೂಲಕ ಕಲಿಯುತ್ತಾರೆ. ಈ ಅಂಗನವಾಡಿ ಕೇಂದ್ರಗಳಿಗೆ ಬರುವ ಬಹುತೇಕ ಮಕ್ಕಳು ಸೌಲಭ್ಯವಂಚಿತ ಕುಟುಂಬಗಳಿಗೆ ಸೇರಿದವರು. ಈ ಮಕ್ಕಳ ಕಲಿಕಾ ಸಾಮರ್ಥ್ಯವು ಅವರ ಸಮಾಜೋ–ಆರ್ಥಿಕ ಸ್ಥಿತಿಗತಿಯನ್ನು ಅವಲಂಬಿಸಿದೆಯೇ? ಒಂದು ವೇಳೆ ಅವರು ಓದಲು ಅಥವಾ ಬರೆಯಲು ವಿಫಲರಾಗುತ್ತ, ಶಾಲೆಯಿಂದ ಹೊರಗುಳಿಯುತ್ತಲೇ ಬೆಳೆದರೆ, ಅದು ಸೋಮಾರಿತನ, ಕೆಟ್ಟ ಹವ್ಯಾಸ ಅಥವಾ ಶಿಕ್ಷಣದ ಬಗೆಗಿನ ನಿರಾಸಕ್ತಿ ಮುಂತಾದುವುಗಳಿಂದ ಪ್ರಭಾವಿತವಾದ ಅವರ ವೈಯಕ್ತಿಕ ಅನರ್ಹತೆಯ ಪರಿಣಾಮವೇ? ಬಡತನ, ಜಾತಿ, ಧರ್ಮ ಮತ್ತು ಇತರ ಸಾಮಾಜಿಕ ಭೇದಗಳು ಅವರ ಕಲಿಕಾ ಸಾಮರ್ಥ್ಯಕ್ಕೆ ಕಾರಣವಾಗುತ್ತವೆಯೇ?

ಪ್ರಕರಣ 1

ಹಿನ್ನೆಲೆ

ಮೂರರ ಹರೆಯದ ಆರೋಗ್ಯವಂತ ಮಗು ದೇವಿಕಾ, 'ಅಮ್ಮ' ಎಂಬಂತಹ ಪದಗಳನ್ನಷ್ಟೇ ಅಸ್ಪಷ್ಟವಾಗಿ ಉಚ್ಚರಿಸಬಲ್ಲಳು ಮತ್ತು ಕೆಲವೇ ಶಬ್ದಗಳನ್ನು ಮಾಡಬಲ್ಲಳು. ಅವಳನ್ನು ಮಾತು ಬಾರದ ನತದೃಷ್ಟ ಮಗು ಎಂದೇ ಪರಿಗಣಿಸಲಾಗಿತ್ತು. ಅವಳ ಮಾತನಾಡಲಾಗದ ತೊಂದರೆಯ ಬಗ್ಗೆ ತಂದೆತಾಯಿಗೆ ಚಿಂತೆಯಾಗಿತ್ತು. ಅವರು ದೇವರ ಮೊರೆ ಹೋಗಿದ್ದರು ಮತ್ತು ಸಾಕಷ್ಟು ಪೂಜೆಗಳನ್ನು ಮಾಡಿದ್ದರು. ಆದರೆ ಆ ಪ್ರಯತ್ನಗಳೆಲ್ಲವೂ ನಿಷ್ಪ್ರಯೋಜಕವಾಗಿ ಅವರು ಹತಾಶೆಯಿಂದ ಬಳಲಿದ್ದರು. ಎಲ್ಲಾ ಆಸೆಗಳನ್ನೂ ಬಿಟ್ಟಿದ್ದ ಅವಳ ತಾಯಿ ಒಂದು ದಿನ 'ಆರಂಭಿಕ ಬಾಲ್ಯ ಕಾಳಜಿ ಮತ್ತು ಶಿಕ್ಷಣ ದಿನ' ('Early Childhood Care and Education Day) (ಶಿಕ್ಷಕರು–ಪೋಷಕರ ಸಭೆ)ಕ್ಕೆ ಹಾಜರಾದರು. ಆ ಸಭೆಯಲ್ಲಿ ಶಿಕ್ಷಕರು ಆರಂಭಿಕ ಬಾಲ್ಯ ಶಿಕ್ಷಣ (Early Childhood Education-ECE) ಮತ್ತು ಮಕ್ಕಳ ಸಮರ್ಪಕ ಬೆಳವಣಿಗೆಗೆ ಬಾಲ್ಯದಲ್ಲಿ ಸಿಗಬೇಕಾದ ಅವಕಾಶಗಳ ಬಗ್ಗೆ ತಿಳಿಸಿದರು. ಆ ತಾಯಿ ತಕ್ಷಣವೇ ತನ್ನ ಮಗಳನ್ನು ಒಂದು ಅಂಗನವಾಡಿ ಕೇಂದ್ರಕ್ಕೆ ದಾಖಲಿಸಿದರು.

ಮಧ್ಯಂತರ

ದೇವಿಕಾ ಆರಂಭದಲ್ಲಿ ಅಳುಕಿದರೂ ಶಿಕ್ಷಕಿ ಒದಗಿಸಿದ ಮುಕ್ತ ಆಟದ ಅವಕಾಶಗಳಿಂದಾಗಿ ಬಹಳ ಬೇಗನೆ ಇತರೆ ಮಕ್ಕಳ ಜೊತೆಗೆ ಬೆರೆಯಲು ಆರಂಭಿಸಿದಳು. ಅಂಗನವಾಡಿಯ ಭೌತಿಕ ವ್ಯವಸ್ಥೆಯು ಹೊಸತನ್ನು ಕಂಡುಕೊಳ್ಳುವ ಅವಳ ಆಸಕ್ತಿಯನ್ನು ಕೆರಳಿಸಿತ್ತು. ಅವಳು ಆಟದ ಸಾಮಗ್ರಿಗಳನ್ನು ಬಳಸಲಾರಂಭಿಸಿದಳು ಮತ್ತು ವಸ್ತುಗಳತ್ತ ಕೈ ತೋರಿಸಿ ಪದಗಳನ್ನು ಅಸ್ಪಷ್ಟವಾಗಿ ಉಚ್ಚರಿಸಲು ತೊಡಗಿದಳು. ದೇವಿಕಾ ತೋರಿಸಿದ ವಸ್ತುಗಳ ಹೆಸರುಗಳನ್ನು ಹೇಳುವ ಮೂಲಕ ಶಿಕ್ಷಕರು ಅವಳಿಗೆ ನೆರವಾಗುತ್ತಿದ್ದರು. ಇದನ್ನು ಗಮನಿಸಿದ ಅವಳದೇ ವಯಸ್ಸಿನ ಇತರ ಮಕ್ಕಳೂ ಕೂಡಾ ಸರಳ ಪದಗಳ ಕಲಿಕೆಗೆ ಅವಳಿಗೆ ನೆರವಾದರು. ನಿಧಾನವಾಗಿ ಅವಳು ಸಣ್ಣಸಣ್ಣ ವಾಕ್ಯಗಳನ್ನು ರಚಿಸಲು ಸಮರ್ಥಳಾದಳು. ದೇವಿಕಾ ಪ್ರತಿದಿನ ಕೇಂದ್ರಕ್ಕೆ ಬರುವಂತೆ ಅವಳ ತಾಯಿ ನೋಡಿಕೊಂಡರು. ದೇವಿಕಾ ತರಗತಿಯಲ್ಲಿ ಎಲ್ಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಶಿಕ್ಷಕರೂ ನೋಡಿಕೊಂಡರಲ್ಲದೆ ಹೆಚ್ಚುಹೆಚ್ಚು ಅವಕಾಶಗಳನ್ನು ಕೊಟ್ಟರು. ಇದರಿಂದ ಅಂತರ್ಮುಖಿಯಾದ ಮತ್ತು ಒಂಟಿಯಾಗಿದ್ದ ಒಂದು ಮಗು ಕ್ರಿಯಾಶೀಲ ಮತ್ತು ಖುಷಿಯ ಮಗುವಾಗಿ ಮಾರ್ಪಟ್ಟಿತು. ಪ್ರತಿಫಲನ ಅಂಗನವಾಡಿ ಕೇಂದ್ರದ ಭಯ–ಮುಕ್ತವಾದ ಕಲಿಕೆಯ ವಾತಾವರಣವೇ ದೇವಿಕಾಳಿಗೆ ಆನಂದದಿಂದ ತೊಡಗಿಸಿಕೊಳ್ಳಲು ಕಾರಣವಾಯಿತು. ಶಿಕ್ಷಕಿಯ ಸಂವಾದಗಳು, ಕತೆ ಹೇಳುವುದು, ನೃತ್ಯದೊಂದಿಗೆ ಹಾಡುವುದು ಮತ್ತು ಆಟೋಟ ಚಟುವಟಿಕೆಗಳು, ಅವಳ ಭಾಷಾ ಬೆಳವಣಿಗೆಗೆ ಮತ್ತು ನಿರಂತರ ಪ್ರೋತ್ಸಾಹವು ಕಲಿಕೆಗೆ ನೆರವಾಯಿತು. ಮಗುವಿನ ತಾಯಿಯೂ ಅವಳು ಪ್ರತಿನಿತ್ಯ ಶಾಲೆಗೆ ಹಾಜರಾಗುವಂತೆ ನೋಡಿಕೊಂಡರಲ್ಲದೆ ಮನೆಯಲ್ಲಿಯೂ ಮಗುವಿನೊಂದಿಗೆ ಹೆಚ್ಚಿನ ಸಮಯ ಕಳೆದು ಕೇಂದ್ರದಲ್ಲಿ ಕಲಿತದ್ದನ್ನು ಮತ್ತೆ ಹೇಳಿಕೊಟ್ಟರು. ಪೋಷಕರು ಮತ್ತು ಶಿಕ್ಷಕರ ಸಭೆಯೊಂದರಲ್ಲಿ ದೇವಿಕಾಳ ತಾಯಿ ತನ್ನ ಅನುಭವವನ್ನು ಇತರ ಪೋಷಕರೊಂದಿಗೆ ಹಂಚಿಕೊಂಡರು. ಮಕ್ಕಳ ಬೆಳವಣಿಗೆಯಲ್ಲಿ ಆರಂಭಿಕ ಬಾಲ್ಯ ಶಿಕ್ಷಣದ ಅವಶ್ಯಕತೆಯನ್ನು ಅವರು ಒತ್ತಿಹೇಳಿದರು.

ಪ್ರಕರಣ 2

ಹಿನ್ನೆಲೆ

ಅಂಗನವಾಡಿ ಕೇಂದ್ರಕ್ಕೆ ಸೇರುವಾಗ ಬಾಲನಿಗೆ ಇನ್ನೂ ಮೂರು ವರ್ಷ. ಇತರ ಮಕ್ಕಳು ಚಟುವಟಿಕೆಗಳಲ್ಲಿ ನಿರತರಾಗಿರುವಾಗ ಅವನು ಕೇಂದ್ರದ ಒಂದು ಮೂಲೆಯಲ್ಲಿ ಕುಳಿತಿರುತ್ತಿದ್ದ. ಅವನು ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ಏನಾದರೂ ಪ್ರಶ್ನಿಸಿದರೂ ಅವನು ಉತ್ತರಿಸುತ್ತಿರಲಿಲ್ಲ. ಬಾಲನ ತಂದೆ ತಾಯಿ ಪರಸ್ಪರ ಬೇರ್ಪಟ್ಟಿದ್ದು, ಅವನು ತನ್ನ ತಾಯಿಯೊಂದಿಗೆ ವಾಸಿಸುತ್ತಿದ್ದನು. ದಿನಗೂಲಿ ಕೆಲಸ ಮಾಡುತ್ತಿದ್ದ ಅವನ ತಾಯಿಗೆ ಅವನೊಂದಿಗೆ ಹೆಚ್ಚು ಸಮಯ ಕಳೆಯಲಾಗುತ್ತಿರಲಿಲ್ಲ. ತಂದೆ–ತಾಯಿ ಜೊತೆಗಿದ್ದಾಗ ಪ್ರತಿದಿನವೆಂಬಂತೆ ಮದ್ಯವ್ಯಸನಿ ತಂದೆ, ತಾಯಿಗೆ ನೀಡುತ್ತಿದ್ದ ಹಿಂಸೆಗೆ ಆತ ಸಾಕ್ಷಿಯಾಗಿರುತ್ತಿದ್ದ. ಒಂದು ದಿನ ಅವನ ತಂದೆ, ಬಾಲ ಮತ್ತು ಅವನ ಸಹೋದರಿಯನ್ನು ಸ್ನಾನದ ಮನೆಯಲ್ಲಿ ಕೂಡಿಹಾಕಿ, ತಾಯಿಗೆ ಬೆಂಕಿ ಹಚ್ಚುವ ಪ್ರಯತ್ನ ಮಾಡಿದ್ದ. ಅದೃಷ್ಟವಶಾತ್ ಅವನ ತಾಯಿ ತಪ್ಪಿಸಿಕೊಂಡಿದ್ದಳು ಮತ್ತು ತಂದೆ

ಜೈಲುಪಾಲಾಗಿದ್ದ. ಅಂದಿನಿಂದ ಬಾಲ ಮಾತು ನಿಲ್ಲಿಸಿದ. ತಾಯಿ ಮತ್ತು ಸಹೋದರಿಯ ಹೊರತು ಬೇರೆ ಯಾರೊಂದಿಗೂ ಮಾತನಾಡುತ್ತಿರಲಿಲ್ಲ.

ಮಧ್ಯಪ್ರವೇಶ

ಶಿಕ್ಷಕರು ಪ್ರಜ್ಞಾಪೂರ್ವಕವಾಗಿ ಬಾಲನೊಂದಿಗೆ ನಿರಂತರವಾಗಿ ಮಾತನಾಡುತ್ತಲೇ ಇರುತ್ತಿದ್ದರು, ಮತ್ತು ಬೇರೆ ಮಕ್ಕಳ ಪ್ರಶ್ನೆಗೆ ಪ್ರತಿಕ್ರಿಯಿಸುವಂತೆ, ಆಟಿಕೆಗಳೊಂದಿಗೆ ಆಟವಾಡುವಂತೆ ಪ್ರೇರೇಪಿಸುತ್ತಿದ್ದರು. ಅಂಗನವಾಡಿ ಸಹಾಯಕಿಯೂ ಅವನ ಜೊತೆ ಕುಳಿತುಕೊಂಡು ಉತ್ತೇಜಿಸುತ್ತಿದ್ದರಲ್ಲದೆ ಬೇರೆ ಮಕ್ಕಳೊಂದಿಗೂ ಬೆರೆಯುವಂತೆ ನೋಡಿಕೊಳ್ಳುತ್ತಿದ್ದರು. ಅಲ್ಲದೆ, ಅಂಗನವಾಡಿ ಕೇಂದ್ರಕ್ಕೆ ಕೊಳಕಾಗಿ ಬರುತ್ತಿದ್ದ ಕಾರಣ ಅವನು ವೈಯಕ್ತಿಕ ಶುಚಿತ್ವದ ಕಡೆಗೂ ಗಮನಹರಿಸುವಂತೆ ಮಾಡುತ್ತಿದ್ದರು. ಕ್ರಮೇಣ ಆ ಸಹಾಯಕಿಯೊಂದಿಗೆ ಆಟವಾಡಲು ಶುರುಮಾಡಿದ ಬಾಲ ಇತರ ಮಕ್ಕಳೊಂದಿಗೆ ಕೂಡಾ ಬೆರೆಯಲಾರಂಭಿಸಿದ. ಕೆಲವೇ ತಿಂಗಳಲ್ಲಿ ಅವನು ಆಟೋಟ ಚಟುವಟಿಕೆ, ಕಲಾ ಚಟುವಟಿಕೆಗಳಲ್ಲಿ ಬಹಳ ಉಮೇದಿನಿಂದ ಪಾಲ್ಗೊಳ್ಳಲಾರಂಭಿಸಿದ ಮತ್ತು ತೆರೆದ ತುದಿಯುಳ್ಳ ಆಟಿಕೆಗಳಾದ ಬ್ಲಾಕ್ ಮತ್ತು ಸ್ಟ್ರಾಗಳ ಜೊತೆ ಕೈಚಳಕ ತೋರಿಸಲಾರಂಭಿಸಿದ.

ಪರ್ಯಾಲೋಚನೆ

ಶಿಕ್ಷಕಿ ಮತ್ತು ಸಹಾಯಕಿಯಿಂದ ನಿರಂತರ ಗಮನ, ಪ್ರೋತ್ಸಾಹ ಮತ್ತು ಸ್ಫೂರ್ತಿ ಸಿಕ್ಕಿದ್ದರಿಂದ ಬಾಲ ತನ್ನ ಮನೆಯ ಅನನುಕೂಲ ವಾತಾವರಣದಿಂದಾಗಿ ಅನುಭವಿಸುತ್ತಿದ್ದ ಖಿನ್ನತೆಯಿಂದ ಹೊರಬರಲು ಸಾಧ್ಯವಾಯಿತು. ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಇದು ಸುರಕ್ಷಿತ ಮತ್ತು ಹಿತಕರವಾದ ವಾತಾವರಣ ಎಂಬುದು ಖಾತರಿಯಾಗುತ್ತಲೇ ಬಾಲ ಆಟೋಟ ಮತ್ತು ಇತರ ಚಟುವಟಿಕೆಗಳಲ್ಲಿ ಎಲ್ಲಾ ಮಕ್ಕಳೊಂದಿಗೆ ಬೆರೆಯಲಾರಂಭಿಸಿದ. ಮಗುವಿನಲ್ಲಿ ಮೂಡಿದ ಆತ್ಮವಿಶ್ವಾಸದಿಂದಾಗಿ ಕಲಿಕೆ ಮತ್ತು ಬೆಳವಣಿಗೆಗೆ ಹೆಚ್ಚಿನ ಅವಕಾಶ ಸೃಷ್ಟಿಯಾಯಿತು.



ನಿರ್ಣಯ

ಅಂಗನವಾಡಿ ಕೇಂದ್ರಗಳಿಗೆ ಬರುವ ಬಹುತೇಕ ಮಕ್ಕಳು ಶಾಲೆಗೆ ಹೋಗುವ ಮೊದಲ ತಲೆಮಾರಿನವರಾಗಿದ್ದು, ಅವರ ಬದುಕು ಸಮಾಜೋ-ಸಾಂಸ್ಕೃತಿಕ ರೂಢಿಗಳ ತೊಡಕು ಮತ್ತು ಆರ್ಥಿಕ ನಿರ್ಬಂಧಗಳಿಂದ ಕೂಡಿರುತ್ತದೆ. ಮಕ್ಕಳ ಕಲಿಕಾ ಸಾಮರ್ಥ್ಯವು ಅವರ ಕುಟುಂಬದ ಸಮಾಜೋ-ಆರ್ಥಿಕ ಸ್ಥಿತಿಗತಿಯನ್ನು ಅವಲಂಬಿಸಿರುವುದಿಲ್ಲ ಎಂಬುದನ್ನು ಸಾರುವ ಪುಟ್ಟ ಮಕ್ಕಳ ಪ್ರತಿನಿಧಿಗಳು ದೇವಿಕಾ ಮತ್ತು ಬಾಲ. ಸಮಾನ ಅವಕಾಶಗಳನ್ನು ನೀಡುತ್ತಾ ಸಂತೋಷಕರ ಕಲಿಕೆಯ ವಾತಾವರಣವನ್ನು ಒದಗಿಸುವ, ಕಾಳಜಿ ಮತ್ತು ಬೆಂಬಲ ನೀಡುವ ಶಿಕ್ಷಕರಿಂದ ಈ ಮಕ್ಕಳ ಬದುಕಿನಲ್ಲಿ ಭಾರೀ ದೊಡ್ಡ ಬದಲಾವಣೆಯನ್ನು ತರಲು ಸಾಧ್ಯ. ಅತ್ಯುನ್ನತ ಗುಣಮಟ್ಟದ ಇಸಿಇ ಕಾರ್ಯಕ್ರಮದ ಜಾರಿಯಲ್ಲಿ, ಅನುಭವಗಳು ಮತ್ತು ಸಮಗ್ರ ದೃಷ್ಟಿಕೋನದ ನಡುವಿನ ಸಂಬಂಧವನ್ನು ಅರ್ಥೈಸಿಕೊಂಡ ಮತ್ತು ಪ್ರತಿ ಮಗುವಿನ ಅವಶ್ಯಕತೆಯ ಬಗ್ಗೆ ಸಂವೇದನಾಶೀಲರಾಗಿರುವ ಸಮರ್ಥ ಶಿಕ್ಷಕರ ಪಾತ್ರ ಬಹಳ ಮುಖ್ಯ.

ಈ ಶಿಕ್ಷಕರು ಸುರಕ್ಷಿತ ಮತ್ತು ಸ್ವಚ್ಛ ವಾತಾವರಣ ಹಾಗೂ ಕರಿಹಲಗೆಗಳ ಉಪಯೋಗ, ಕಲಿಕಾ ಅವಕಾಶಗಳು, ವೃತ್ತಾಕಾರದಲ್ಲಿ ಕುಳಿತುಕೊಳ್ಳುವ ವ್ಯವಸ್ಥೆ, ಮುದ್ರಣಸ್ನೇಹಿ ವಾತಾವರಣ ಮತ್ತಿತರ ಪಠ್ಯ ಮೂಲಸೌಕರ್ಯಗಳ ನಿರ್ವಹಣೆ ಮೂಲಕ ಮಕ್ಕಳಿಗೆ ಅವರ ಸೀಮಿತ ಹಣಕಾಸಿನ ನಿರ್ಬಂಧಗಳ ನಡುವೆಯೇ ಕಲಿಕೆಯ ಅವಕಾಶ ಒದಗಿಸುತ್ತಾರೆ. ಅವರು ಅಂಗನವಾಡಿ ಕೇಂದ್ರ, ಪೋಷಕರು, ಸಮುದಾಯದ ನಡುವೆ ಒಂದು ಸೌಹಾರ್ದ ನಂಟನ್ನು ಸೃಷ್ಟಿಸುವರಲ್ಲದೆ, ಒಂದು ಮಗುವಿನ ಉತ್ಕೃಷ್ಟ ಬೆಳವಣಿಗೆಯನ್ನು ಕಾಯ್ದುಕೊಳ್ಳಲು ಈ ಎಲ್ಲದರ ನಡುವೆ ಅನ್ಯೋನ್ಯ ಸಂಬಂಧವನ್ನೂ ಬೆಸೆಯುತ್ತಾರೆ. ಮಕ್ಕಳು ಕಲಿಯುವಂತೆ ಮಾಡಬಲ್ಲ ಯಾವುದೇ ಸಮರ್ಥ ವಿಧಾನ ಇಲ್ಲ. ಪ್ರತಿ ಮಗುವೂ ಅನನ್ಯ ಮತ್ತು ಪ್ರತಿಯೊಬ್ಬರೂ ವಿಭಿನ್ನ ರೀತಿಯಲ್ಲಿ, ಪ್ರತ್ಯೇಕ ಸಮಯದಲ್ಲಿ ಮತ್ತು ವಿಭಿನ್ನ ಸ್ಥಳಗಳಲ್ಲಿ ಕಲಿಯುತ್ತಾರೆ. ಮಕ್ಕಳನ್ನು ಅನುಭವ, ಪ್ರಯೋಗ ಮತ್ತು ತಮ್ಮ ಸುತ್ತಲಿನ ಸಂಗತಿಗಳನ್ನು ಪ್ರಶ್ನಿಸಲು ಉತ್ತೇಜಿಸುವಂತಹ ಮತ್ತು ಬೆಂಬಲಿಸುವಂತಹ ವಾತಾವರಣವನ್ನು ಶಿಕ್ಷಕರು ಸೃಷ್ಟಿಸ-ಬೇಕಾಗುತ್ತದೆ. ಆಗ ಪ್ರತಿ ಮಗುವೂ ಕಲಿಯಬಲ್ಲದು.

ಆರಂಭಿಕ ಬಾಲ್ಯ ಶಿಕ್ಷಣದ ಉಪಕ್ರಮ

೩ರಿಂದ ೬ರ ವಯಸ್ಸಿನ ಮಕ್ಕಳ ಸಮಗ್ರ ಬೆಳವಣಿಗೆಯನ್ನು ಗುರಿಯಾಗಿಟ್ಟುಕೊಂಡು ಅಂಗನವಾಡಿ ಕೇಂದ್ರಗಳನ್ನು ಸ್ಪಂದನಶೀಲ ಕಲಿಕಾ ಕೇಂದ್ರಗಳಾಗಿ ಮಾರ್ಪಡಿಸುವ ಗುರಿಯಾಗಿಟ್ಟುಕೊಂಡು ಚಿಂತನಶೀಲ ವೃತ್ತಿಪರರಾಗಬೇಕೆಂಬ ನಿಟ್ಟಿನಲ್ಲಿ ಅಂಗನವಾಡಿ ಶಿಕ್ಷಕರ ಕಲಿಕಾ ಸಾಮರ್ಥ್ಯದ ಬೆಳವಣಿಗೆಯ ಮೇಲೆ ಸಂಗಾರೆಡ್ಡಿ ಬಾಲ್ಯಪೂರ್ವ ಶಿಕ್ಷಣ ಉಪಕ್ರಮವು (The Sangareddy Early Childhood Education Initiative) ಗಮನ ಕೇಂದ್ರೀಕರಿಸುತ್ತದೆ. ಈ ಮಧ್ಯಪ್ರವೇಶವು ಐಸಿಡಿಎಸ್‌ನ ಪ್ರಸ್ತುತ ವ್ಯವಸ್ಥಿತ ಸಂಪನ್ಮೂಲಗಳ ಚೌಕಟ್ಟಿನಲ್ಲೇ ಇರುತ್ತದೆ. ಶಿಕ್ಷಕರ ಸಾಮರ್ಥ್ಯ ಬೆಳವಣಿಗೆಯು ಗುಣಮಟ್ಟದ ಆರಂಭಿಕ ಬಾಲ್ಯ ಶಿಕ್ಷಣ ಕಾರ್ಯಕ್ರಮ ಮತ್ತು ಮಕ್ಕಳಿಗೆ ಲಭ್ಯವಿರುವ ಆರಂಭಿಕ ಬಾಲ್ಯ ಶಿಕ್ಷಣದ ಅವಕಾಶಗಳನ್ನು ಕೇಂದ್ರಿತವಾಗಿರುತ್ತದೆ. ಇಂಥ ಸಮಗ್ರವಾದ 'ಸೇವಾನಿರತರ ಸಾಮರ್ಥ್ಯ ಅಭಿವೃದ್ಧಿ ಮಾದರಿಯು (In-service capacity development model) ಮಕ್ಕಳಿಗೆ ಸಮರ್ಪಕ ಪಠ್ಯ ಅಭಿವೃದ್ಧಿ-ಪಡಿಸುವಲ್ಲಿ ಶಿಕ್ಷಕರ ಕೌಶಲವನ್ನು ಪರಿಣಾಮಕಾರಿಯಾಗಿ ಬೆಳೆಸುವಲ್ಲಿ ನೆರವಾಗಬಲ್ಲದು ಎಂಬುವುದು ನಮ್ಮ ಅನುಭವವಾಗಿದೆ.

ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯಾದ್ಯಂತ ಎಲ್ಲಾ ಶಿಕ್ಷಕರಿಗೆ ಸೇವಾನಿರತ ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಯನ್ನು ಒಂದು ಬಹುಮುಖಿ ಮಾದರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಕಾರ್ಯಾ-ಗಾರಗಳು, ಕೇಂದ್ರ ಮಟ್ಟದ ಕಾರ್ಯಕ್ರಮಗಳು, ವಲಯ ಮಟ್ಟದ ಸಭೆಗಳು, ಯೋಜನಾ ಸಭೆಗಳು, ಇಸಿಸಿಇ ದಿನಾಚರಣೆಗಳು, ಬಾಲಮೇಳಗಳು, ವಿಚಾರ ಸಂಕಿರಣಗಳು, ಶಿಕ್ಷಕರ ಸಮ್ಮೇಳನಗಳು ಮತ್ತು ನಿಯತಕಾಲಿಕೆಗಳಂಥ ಬಹುಮುಖಿ ವೇದಿಕೆಗಳಲ್ಲಿ ನಮ್ಮ

ಕಾರ್ಯಕ್ರಮದ ಮುಖ್ಯಾಂಶಗಳನ್ನು ಶಿಕ್ಷಕರ ಜೊತೆಗೆ ಹಂಚಿಕೊಂಡು ನೆರವಾಗುವುದರಿಂದ ಅವರ ನಡುವೆ ಕಲಿಕೆಯ ಉತ್ತಮ ಅಭ್ಯಾಸಗಳು ಸಾಧ್ಯವಾಗುತ್ತದೆ. ಅನುಭವಾಧಾರಿತ ವಿಧಾನದಲ್ಲಿ ಶಿಕ್ಷಕರು ಸ್ವಾನುಭವದ ಚಟುವಟಿಕೆಗಳ ಮೂಲಕ ಕಠಿಣವಾದ ಜೀವನ ಕೌಶಲಗಳನ್ನು ಮಕ್ಕಳಿಗೆ ಕಲಿಸಲು ಅವಕಾಶವಿರುತ್ತದೆ.

ಶಿಕ್ಷಕರ ಪ್ರಭಾ ವಲಯದಲ್ಲಿ ಮಕ್ಕಳ ಕಲಿಕೆಯನ್ನು ಸಾಧ್ಯವಾಗಿಸುವ ಅಂಶಗಳು

ಅಂಗನವಾಡಿ ಕೇಂದ್ರಗಳಿಗೆ ಹಾಜರಾಗುವ ಮಕ್ಕಳ ಕಲಿಕೆ ಮತ್ತು ಬೆಳವಣಿಗೆಯನ್ನು ಸಾಧ್ಯವಾಗಿಸಬಲ್ಲ ಒಂದು ಉತ್ತಮ ಇಸಿಇ ಕಾರ್ಯಕ್ರಮವು ಶಿಕ್ಷಕರನ್ನು ಆಧರಿಸಿರುತ್ತದೆ. ಅಂತಹ ಕೆಲವು ಪ್ರಮುಖ ಅಂಶಗಳನ್ನು ಇಲ್ಲಿ ಕೊಡಲಾಗಿದೆ. ಇದನ್ನೇ ಒಂದು ಮಾರ್ಗಸೂಚಿಯಾಗಿ ಬಳಸಿ ಒಬ್ಬ ಶಿಕ್ಷಕ/ಕಿಯು ಈ ಕಾರ್ಯ-ಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಸಾಧ್ಯ..

ಪ್ರತಿದಿನ, ಶಿಕ್ಷಕರು ಸ್ವಚ್ಛ ಮತ್ತು ಪೌಷ್ಟಿಕ ಆಹಾರವನ್ನು ಕೊಡುತ್ತಾರೆ ಮತ್ತು ಮಕ್ಕಳು ಊಟಕ್ಕೆ ಮೊದಲು ಮತ್ತು ನಂತರ ತಮ್ಮ ಕೈಗಳನ್ನು ತೊಳೆಯುವುದನ್ನು ಖಾತರಿಪಡಿಸಿಕೊಳ್ಳಬೇಕು ಹಾಗೂ ಊಟದ ಬಳಿಕ ಕನಿಷ್ಠ ಒಂದು ಗಂಟೆ ವಿಶ್ರಾಂತಿ ನೀಡಬೇಕು.

* ಪ್ರತಿ ತಿಂಗಳು ಶಿಕ್ಷಕಿಯು ಮಕ್ಕಳ ಬೆಳವಣಿಗೆಯನ್ನು (ಎತ್ತರ ಮತ್ತು ತೂಕ) ಅಳತೆ ಮಾಡಬೇಕು.
* ಶಿಕ್ಷಕಿಯು ಕೇಂದ್ರದಲ್ಲಿ ಒಂದು ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಹೊಂದಿರಬೇಕು ಮತ್ತು ಕೇಂದ್ರ ಹಾಗೂ ಅದರ ಸುತ್ತಮುತ್ತ ಸ್ವಚ್ಛ, ಸುರಕ್ಷಿತ ವಾತಾವರಣವನ್ನು ಕಲ್ಪಿಸಬೇಕು.
* ಶಿಕ್ಷಕಿಯು ಒಂದು ವಿಷಯಾಧಾರಿತ ವೇಳಾಪಟ್ಟಿಯನ್ವಯ ಉತ್ತೇಜನಕಾರಿ ಕಲಿಕಾ ವಾತಾವರಣವನ್ನು ಸಂಘಟಿಸುತ್ತಾರೆ ಮತ್ತು ಆಟದ ಪರಿಕರಗಳು ಮಕ್ಕಳಿಗೆ ದೊರಕುವಂತೆ ನೋಡಿಕೊಳ್ಳುತ್ತಾರೆ.
* ಶಿಕ್ಷಕರು ಮಕ್ಕಳ ಚಟುವಟಿಕೆಗಳನ್ನು ದಾಖಲಿಸಿ ಪ್ರದರ್ಶಿಸುತ್ತಾರೆ.
* ಶಿಕ್ಷಕ/ಕಿ ಮಕ್ಕಳನ್ನು ಕಾಳಜಿಯಿಂದ ನೋಡಿಕೊಳ್ಳುತ್ತಾರೆ ಮತ್ತು ಸಕಾರಾತ್ಮಕ ವಿಧಾನಗಳ ಮೂಲಕ ಶಿಸ್ತು ಕಲಿಸುತ್ತಾರೆ.
* ಶಿಕ್ಷಕ/ಕಿಯು ಮಕ್ಕಳ ಆಟ ಮತ್ತು ಊಟದ ವೇಳೆ ಪರಸ್ಪರ ಸಾಮಾಜಿಕ ಸಂವಾದಕ್ಕೆ ಅವಕಾಶ ಕಲ್ಪಿಸುತ್ತಾರೆ.
* ಅಂಗನವಾಡಿ ಕೇಂದ್ರದಲ್ಲಿ ಪ್ರತಿ ದಿನ ಕನಿಷ್ಠ ಮೂರರಿಂದ ನಾಲ್ಕು ಗಂಟೆ ಇಸಿಇ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತಾರೆ.



ಉತ್ತಮ ಇಸಿಇ ಕಾರ್ಯಕ್ರಮಕ್ಕೆ ದಾರಿ ಮಾಡಿಕೊಡುವ ಪ್ರಮುಖ ಬೋಧನಾ ಅಭ್ಯಾಸಗಳು

ಒಂದು ಸಣ್ಣ ಹಳ್ಳಿಯಲ್ಲಿ ಶಿಕ್ಷಕಿಯಾಗಿರುವ ಶೈಲಜಾ, ಹೆಚ್ಚಿನ ಮಕ್ಕಳು ಕೇಂದ್ರಕ್ಕೆ ಬರುವವರೆಗೂ ಇತರ ಮಕ್ಕಳನ್ನು ಕಲಿಕಾ ತಾಣಗಳಲ್ಲಿ ಮುಕ್ತವಾಗಿ ಆಟವಾಡಲು ಬಿಡುತ್ತಾರೆ. ಮಕ್ಕಳು ತಮ್ಮ ಪಾಡಿಗೆ ಆಟವಾಡುತ್ತಾ ತಮ್ಮದೇ ಅನುಭವಗಳನ್ನು ಪಡೆಯಲು ಅವಕಾಶವಾಗುವಂತೆ ಅವರು ತರಗತಿ ಕೊಠಡಿಯಲ್ಲಿ ಬೇರೆಬೇರೆ ತಾಣಗಳನ್ನು ನಿರ್ಮಿಸಿದ್ದರು. ಮಕ್ಕಳು ಪರಸ್ಪರ ಚರ್ಚಿಸುತ್ತಾ, ಸಹಕರಿಸುತ್ತಾ, ಹಂಚಿಕೊಳ್ಳುತ್ತಾ, ಗುಂಪಿನಲ್ಲಿ ಆಟವಾಡುತ್ತಾ, ತಮ್ಮ ಸರದಿಗೆ ಕಾಯುತ್ತಾ ಸಾಮಾಜಿಕ ಸಾಮರ್ಥ್ಯಗಳನ್ನು ಹೆಚ್ಚಿಸಿ-ಕೊಳ್ಳುತ್ತಿರುತ್ತಾರೆ. ಈ ಮುಕ್ತ ಆಟೋಟದೊಂದಿಗೆ ಶಿಕ್ಷಕಿಯು ಒಳಾಂಗಣ ಮತ್ತು ಹೊರಾಂಗಣ ಆಟಗಳನ್ನೂ ಹೇಳಿಕೊಡುತ್ತಾರೆ.

ಎಲ್ಲಾ ಮಕ್ಕಳು ಕೇಂದ್ರಕ್ಕೆ ಬರುತ್ತಿದ್ದಂತೆ ಶಿಕ್ಷಕ/ಕಿಯು ಎಲ್ಲರನ್ನೂ ವೃತ್ತಾಕಾರದಲ್ಲಿ ಕುಳ್ಳಿರಿಸಿ, ಪ್ರತಿಯೊಬ್ಬರೂ ಸರದಿಯಲ್ಲಿ ಹೋಗಿ ಗೋಡೆಯಲ್ಲಿ ಅಂಟಿಸಿರುವ ಹೆಸರುಗಳ ತಖ್ತೆಯಲ್ಲಿ ತಮ್ಮ ಸಹಿ ಹಾಕುವ ಮೂಲಕ ಹಾಜರಿ ಪಡೆಯುತ್ತಾರೆ. ಹೀಗೆ, ಆ ಶಿಕ್ಷಕಿಯು ವಿವಿಧ ಚಟುವಟಿಕೆಗಳ

ಮೂಲಕ ಅಕ್ಷರಾಭ್ಯಾಸದ ಅನುಭವವನ್ನೂ ಸಂಯೋಜಿಸಿ ಮಕ್ಕಳಿಗೆ ಕೊಡುತ್ತಿದ್ದಾರೆ. ವೃತ್ತದ ಸಮಯ ('circle time') ಅಂಗವಾಗಿ ಕತೆ, ಹಾಡು, ಸಂಖ್ಯಾಧಾರಿತ ಚಟುವಟಿಕೆಗಳ ಮೂಲಕ ಅವರು ಮಾತುಕತೆಯನ್ನು ಆರಂಭಿಸುತ್ತಾರೆ. ಈ ಗುಂಪು ಚಟುವಟಿಕೆಗಳ ಭಾಗವಾಗಿ ಅವರು ಮೂರ್ತ ವಸ್ತುಗಳು ಮತ್ತು ಮುದ್ರಣ ಸಾಮಗ್ರಿಗಳನ್ನು ಬಳಸಿ ಆಲಿಸುವ, ಮಾತನಾಡುವ ಮತ್ತು ಆಟದ ಮೇಲೆ ಗಮನ ಕೊಡುವಂತಹ ಅವಕಾಶ ಸೃಷ್ಟಿಸುತ್ತಾರೆ.

ಮಕ್ಕಳಿಗೆ ಕಥೆ ಪುಸ್ತಕಗಳನ್ನು ಕೊಟ್ಟು ಅದರಲ್ಲಿನ ಚಿತ್ರಗಳನ್ನು ಓದುತ್ತಾರೆ, ಓದುವಂತೆ ನಟಿಸುತ್ತಾರೆ ಇತ್ಯಾದಿ. ಹವಾಮಾನ ಕೋಷ್ಟಕ, ನಿಯಮಗಳ ಕೋಷ್ಟಕ, ಪ್ರದರ್ಶನ ಫಲಕ ರಚನೆಯಂತಹ ಮಕ್ಕಳ ಕ್ರಿಯಾತ್ಮಕ ಅವಕಾಶಗಳನ್ನು ಹೆಚ್ಚಿಸುವ ಇತರ ಚಟುವಟಿಕೆಗಳೂ ಇರುತ್ತವೆ. ಮಕ್ಕಳು ವಿವಿಧ ಭಾವನೆಗಳನ್ನು ಗುರುತಿಸಿ, ಅರ್ಥೈಸಿಕೊಳ್ಳುವಂತೆ ಮಾಡಿ ಅವುಗಳನ್ನು ತಮ್ಮ ದೈನಂದಿನ ಬದುಕಿನ ಅನುಭವದೊಂದಿಗೆ ಜೋಡಿಸುವ ಅವಕಾಶವನ್ನು ಶಿಕ್ಷಕಿ ಒದಗಿಸುತ್ತಾರೆ. ಅವರು ಪ್ರತಿದಿನ ಮಕ್ಕಳಲ್ಲಿ ಕೇಳುವ ಸಾಮಾನ್ಯ ಪ್ರಶ್ನೆಯೆಂದರೆ ‘ಇವತ್ತು ಹೇಗಿದ್ದೀರಿ? ಎಂದು. ಇದಕ್ಕೆ ಪ್ರತಿಯಾಗಿ ಮಗು ಯಾವುದಾದರೂ ಸೂಕ್ತ ಭಾವನೆಯನ್ನು ಸೂಚಿಸುವ ಒಂದು ಕಾರ್ಡ್‌ನ್ನು ಹೆಕ್ಕಿ, ಆ ಕ್ಷಣದ ಭಾವನೆಗೆ ಕಾರಣವನ್ನು ವಿವರಿಸುತ್ತದೆ. ಮಾಡಿ ಕಲಿಯುವ ಅನುಭವ, ಚಿಂತನಶೀಲ ಪ್ರಶ್ನೆಗಳು, ಉಲ್ಲಾಸ, ಅನುಪಾಲನಾ ಚಟುವಟಿಕೆಗಳು, ನಡವಳಿಕೆಗಳ ಸೂಕ್ತ ಪ್ರಾತ್ಯಕ್ಷಿಕೆ, ಮುಕ್ತಆಟದ ಅವಧಿಗಳು, ಗರಿಷ್ಠ ಮತ್ತು ಕನಿಷ್ಠ ತೊಡಗಿಸಿಕೊಳ್ಳುವಿಕೆ ಚಟುವಟಿಕೆಗಳ ಸಮತೋಲನ, ಮುಕ್ತ ಹಾಗೂ ನಿರ್ದೇಶಿತ ಚಟುವಟಿಕೆಗಳು – ಇವು ಆ ಶಿಕ್ಷಕಿ ಕೈಗೊಳ್ಳುವ ದೈನಂದಿನ ವಿಧಾನಗಳು.

ಒಂದು ಅಂಗನವಾಡಿ ಕೇಂದ್ರದಲ್ಲಿ ಶಿಕ್ಷಕಿ ಪ್ರತಿದಿನ ಪಾಲಿಸಬೇಕಾದ ಕೆಲವು ಸರಳ ಆದರೆ ಪ್ರಮುಖ ಅಂಶಗಳನ್ನು ನಮ್ಮ ಅನುಭವದ ಆಧಾರದಲ್ಲಿ ರೂಪಿಸಿ ಇಲ್ಲಿ ಕೊಡಲಾಗಿದೆ. ಇವುಗಳು ಮಕ್ಕಳ ಬೆಳವಣಿಗೆಯ ಮೇಲೆ ಗಮನಾರ್ಹ ಪರಿಣಾಮ ಬೀರಬಲ್ಲವು.

ಅಭ್ಯಾಸ	**ಅವಧಿ**
ಮಾರ್ಗದರ್ಶನದೊಂದಿಗೆ ಒಳಾಂಗಣ ಮತ್ತು ಹೊರಾಂಗಣ ಆಟೋಟಗಳಿಗೆ ಅವಕಾಶ ಕಲ್ಪಿಸುವುದು	೬೦ ನಿಮಿಷ
ಗುಂಪು ಚಟುವಟಿಕೆಯಲ್ಲಿ ಮಕ್ಕಳಿಗೆ ಪರಸ್ಪರ/ಎಲ್ಲರೊಡನೆ ಅರ್ಥಪೂರ್ಣ ಸಂವಾದಕ್ಕೆ ಅವಕಾಶ ಕೊಡುವುದು	ದಿನಕ್ಕೆ ೬೦ ನಿಮಿಷ
ಪ್ರತಿದಿನ ಮಕ್ಕಳ ವರ್ತನೆಯನ್ನು ಗಮನಿಸುವುದು ಮತ್ತು ಸಾಮಾಜಿಕ ಕೌಶಲಗಳ ಬಗ್ಗೆ ಮಾರ್ಗದರ್ಶನ	ನಿರಂತರ
ಮಕ್ಕಳಿಗೆ ಕ್ರಿಯಾಶೀಲ ಅನುಭವ ಕಲ್ಪಿಸಿಕೊಡುವುದು	೨೦ ನಿಮಿಷ
ಮಕ್ಕಳಿಗೆ ಜರೂರಿನ ಅಕ್ಷರಜ್ಞಾನದ ಅನುಭವ ಕಲ್ಪಿಸಿಕೊಡುವುದು	೩೦ ನಿಮಿಷ
ಸಂಖ್ಯೆಗಳ ಪರಿಚಯ ಕೌಶಲಕ್ಕೆ ಪೂರಕವಾಗಿ ಪ್ರಯತ್ನ ಮತ್ತು ಪ್ರಯೋಗ ಕೈಗೊಳ್ಳುವಂತೆ ನೋಡಿಕೊಳ್ಳುವುದು	೩೦ ನಿಮಿಷ



ಒಂದು ಉತ್ತಮ ಇಸಿಇ ಕಾರ್ಯಕ್ರಮಕ್ಕೆ ಕಾರಣವಾಗುವ ಅಂಶಗಳು

ತರಬೇತಿ ಪಡೆದ ಮತ್ತು ಸಮರ್ಥ ಶಿಕ್ಷಕರು ಒದಗಿಸುವ ಒಂದು ಪರಿಣಾಮಕಾರಿಯಾದ, ಸಮರ್ಪಕವಾಗಿ ವಿನ್ಯಾಸಗೊಂಡ ಇಸಿಇ ಕಾರ್ಯಕ್ರಮವು, ಅನುಭವ ಮತ್ತು ಸಮಗ್ರ ಬೆಳವಣಿಗೆಯ ನಡುವಿನ ಕೊಂಡಿಯನ್ನು ಅರ್ಥ ಮಾಡಿಕೊಳ್ಳಬಲ್ಲ ತರಬೇತಿ ಪಡೆದ ಮತ್ತು ಸಮರ್ಥ ಶಿಕ್ಷಕ/ಕಿ ಇರಬೇಕು ಹಾಗೂ ಮಕ್ಕಳ ಅವಶ್ಯಕತೆಯನ್ನು ಅರ್ಥ ಮಾಡಿಕೊಳ್ಳುವಂತಿರಬೇಕು. ಕೆಲವು ಮುಖ್ಯ ಸಂಗತಿಗಳು ಇಲ್ಲಿವೆ:

ಮೂಲ ಸೌಕರ್ಯ

ಸಣ್ಣ ಮಕ್ಕಳಿಗೆ ಅವರ ಕಲಿಕೆ ಮತ್ತು ಬೆಳವಣಿಗೆಗೆ ಪೂರಕವಾದ ವಿಶಾಲ, ಸುರಕ್ಷಿತವಾದ ಹಾಗೂ ಆಧರಿಸುವಂಥ ಒಂದು ಭೌತಿಕ ವಾತಾವರಣದ ಅವಶ್ಯಕತೆಯಿದೆ. ಸಾಕಷ್ಟು ಸ್ಥಳಾವಕಾಶ, ಸ್ವಚ್ಛವಾದ ಶೌಚಾಲಯ, ಸಂಚಾರಿ ಕರಿಹಲಗೆ, ಕಲಿಕಾ ತಾಣಗಳು, ಆಸನ ವ್ಯವಸ್ಥೆ ಇತ್ಯಾದಿಗಳು ಒಂದು ಆರಂಭಿಕ ಕಲಿಕಾ ವಾತಾವರಣವನ್ನು ಒಳಗೊಂಡಿರಲೇ–ಬೇಕಾದ ಆವಶ್ಯಕ ಸೌಕರ್ಯಗಳಾಗಿವೆ. ಇದಕ್ಕೆ ಪೂರಕವಾಗಿ ಮಕ್ಕಳ ಕಲಿಕೆ ಮತ್ತು ಆಟಕ್ಕೆ ಒಳಾಂಗಣ ಹಾಗೂ ಹೊರಾಂಗಣಗಳಲ್ಲಿ ಯಥೇಚ್ಛವಾದ ದೃಶ್ಯ, ಸ್ಪರ್ಶ ಸಂಬಂಧಿಯಾದ ಬರವಣಿಗೆಯ ಪರಿಕರಗಳ ಅಗತ್ಯವಿದೆ.

ಸುನೀತಾ, ಎಂಟು ವರ್ಷಗಳ ಹಿಂದೆ ಸಣ್ಣ ಬಾಡಿಗೆಯ ಕೊಠಡಿಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಲು ಶುರು ಮಾಡಿದ್ದರು. ಅಲ್ಲಿ ಶಾಲಾಪೂರ್ವ ಚಟುವಟಿಕೆಗಳನ್ನು ನಡೆಸಲು ಅವಕಾಶವಿರಲಿಲ್ಲ. ಅವರು ಬೇರೆಡೆಗೆ ಕೇಂದ್ರವನ್ನು ಸ್ಥಳಾಂತರಿಸಲು ಇಚ್ಛಿಸಿದರೂ ಅಂಗನವಾಡಿ ಕೇಂದ್ರಕ್ಕೆ ಸ್ಥಳ ಬಾಡಿಗೆಗೆ ಕೊಡಲು ಜನರು ಒಪ್ಪುತ್ತಿರಲಿಲ್ಲ. ಅಲ್ಲಿನ ಪ್ರಾಥಮಿಕ ಶಾಲೆಯ ಅಡುಗೆ ಕೋಣೆ ಬಳಸದೇ ಇರುವುದು ಗಮನಕ್ಕೆ ಬಂದಾಗ, ಊರವರ ಬೆಂಬಲದೊಂದಿಗೆ ಶಾಲಾ ಮುಖ್ಯೋಪಾಧ್ಯಾಯರನ್ನು ಭೇಟಿಯಾಗಿ ಅಂಗನವಾಡಿ ಕೇಂದ್ರವನ್ನು ಅಲ್ಲಿಗೆ ಸ್ಥಳಾಂತರಿಸಲು ಅನುಮತಿ ಕೋರಿ ಮನವಿ ಮಾಡಿದರು. ಕೆಲವು ತಿಂಗಳು ಕಳೆದರೂ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ಇದೇ ವೇಳೆ ಅಂಗನವಾಡಿ ಕೇಂದ್ರದ ಮಕ್ಕಳ ಉತ್ತಮ ಕಲಿಕೆಗೆ ಅವಕಾಶಗಳನ್ನು ಸೃಷ್ಟಿಸಲು ಸುನೀತಾ ಮಾಡುತ್ತಿರುವ ಪ್ರಯತ್ನಗಳನ್ನೆಲ್ಲಾ ಆ ಮುಖ್ಯೋಪಾಧ್ಯಾಯರು ಗಮನಿಸುತ್ತಿದ್ದರು.

ಆ ಅಂಗನವಾಡಿ ಕೇಂದ್ರಕ್ಕೆ ಹೋಗಿ ತಮ್ಮ ಶಾಲೆಯಲ್ಲಿ ಒಂದನೇ ತರಗತಿಗೆ ದಾಖಲಾದ ಮಕ್ಕಳು ಹಾಗೂ ಕೇಂದ್ರಕ್ಕೆ ಹೋಗಿರದ ಒಂದನೇ ತರಗತಿ ಮಕ್ಕಳಿಗೂ ಸಾಮರ್ಥ್ಯದಲ್ಲಿ ಇರುವ ವ್ಯತ್ಯಾಸವನ್ನೂ ಆ ಮುಖ್ಯೋಪಾಧ್ಯಾಯರು ಗಮನಿಸಿದ್ದರು. ಹಾಗಾಗಿ, ಶಾಲೆಯಲ್ಲೇ ಬಳಸದೇ ಇದ್ದ ಉತ್ತಮವಾದ ಮತ್ತೊಂದು ಕೊಠಡಿಯನ್ನು ಅಂಗನವಾಡಿ ಕೇಂದ್ರಕ್ಕಾಗಿ ಅವರು ಬಿಟ್ಟುಕೊಟ್ಟರು. ಸುನೀತಾ ತಿಂಗಳೊಳಗೆ ಆ ಕೊಠಡಿಯನ್ನು ಸಣ್ಣ ಮಕ್ಕಳ ಕಲಿಕೆಗೆ ಪೂರಕವಾದ, ಸಾಕ್ಷರ ಶ್ರೀಮಂತವಾದ ಒಂದು ಸ್ಪಂದನಶೀಲ ಸ್ಥಳವಾಗಿ ಬದಲಾಯಿಸಿದರು. ಯೋಗ್ಯ ಸ್ಥಳಕ್ಕೆ ಕೇಂದ್ರವನ್ನು ಸ್ಥಳಾಂತರಿಸಬೇಕೆಂಬ ಸುನೀತಾರ ದೃಢವಾದ ಪ್ರಯತ್ನದಿಂದಾಗಿ, ಮಕ್ಕಳ ದೈನಂದಿನ ಚಟುವಟಿಕೆಗೆ ಅವಶ್ಯಕವಾಗಿದ್ದ ಉತ್ತಮ ವಾತಾವರಣದಲ್ಲಿ ಕೇಂದ್ರವು ನಡೆಯುವಂತಾಯಿತು.

ಪಠ್ಯಕ್ರಮ

ಮಕ್ಕಳ ಸಮಗ್ರ ಬೆಳವಣಿಗೆಗೆ ಸಮರ್ಪಕವಾದ ವಿಕಾಸಾತ್ಮಕ ಪಠ್ಯಕ್ರಮವೂ ಅತ್ಯವಶ್ಯ. ಅನುಭವಾಧಾರಿತ ಚರ್ಚಾತ್ಮಕ ಬೋಧನೆ, ಕ್ರೀಡೆ ಆಧಾರಿತ ಚಟುವಟಿಕೆಗಳು, ಹೊರಾಂಗಣ ಚಟುವಟಿಕೆಗಳು ಮತ್ತು ಪರಿಕರಗಳೊಂದಿಗೆ ತೊಡಗಿಸಿ–ಕೊಳ್ಳುವುದು ಕೂಡಾ ಒಳಗೊಂಡಿರಬೇಕು.

ಬಾಲಮಣಿ ಟೀಚರ್, ಕಲಿಕೆ ಮತ್ತು ಬೋಧನಾ ಪರಿಕರ (ಟಿ.ಎಎಲ್.ಎಂ – Teaching-Learning Materials - TLM)ಗಳ ಬಳಕೆಯ ಮೂಲಕ ಮಕ್ಕಳ ಬೆಳವಣಿಗೆಗೆ ಸಾಕಷ್ಟು ಅವಕಾಶ ಸೃಷ್ಟಿಸುತ್ತಾರೆ. ಅವರು ಬಣ್ಣದ ಬಟ್ಟೆಯ ತುಂಡುಗಳು, ಮೊಟ್ಟೆಯ ತಟ್ಟೆಗಳು, ಕಾಗದದ ಲೋಟಗಳನ್ನು ಬಳಸಿ ಮಕ್ಕಳಿಗೆ ಹೊಂದಾಣಿಕೆ, ವರ್ಗೀಕರಣ, ಮಾದರಿಗಳ ತಯಾರಿ ಮೂಲಕ ಮಕ್ಕಳ ಪೂರ್ವ ಸಂಖ್ಯಾಶಾಸ್ತ್ರದ ಸಾಮರ್ಥ್ಯವನ್ನು ಹೇಳಿಕೊಡುತ್ತಾರೆ. ಹೀಗೆ ಬಗೆಬಗೆಯ ಪರಿಕರಗಳ ಜೊತೆಗೆ ವಿವಿಧ ಚಟುವಟಿಕೆಗಳಲ್ಲಿ ಮಕ್ಕಳು ಭಾಗಿಯಾದಾಗ ಅವರ ಗಮನದ ಅವಧಿ ಏರಿಕೆಯಾಗಿ, ಅಲ್ಪಾವಧಿಯಲ್ಲೇ ಹಲವು ಪರಿಕಲ್ಪನೆಗಳನ್ನು ಬೆಳೆಸಲು ಶಿಕ್ಷಕರಿಗೂ ಸಾಧ್ಯವಾಗಿದೆ. ಟಿಎಲ್ಎಂಗಳ ಅಲಭ್ಯತೆಯು ಕಾರಣಕ್ಕೆ ಅವರು ನಿರಾಶರಾಗದೆ ಸ್ಥಳೀಯವಾಗಿ ಲಭ್ಯವಿರುವ ಸಾಮಗ್ರಿಗಳನ್ನೇ ಬಳಸಿ ಖರ್ಚಿಲ್ಲದ ಸರಳ ಉಪಾಯಗಳೊಂದಿಗೆ ಮಕ್ಕಳಿಗೆ ಸ್ವಾನುಭವದೊಂದಿಗೆ ಕಲಿಯುವ ವಾತಾವರಣ ಕಲ್ಪಿಸಿದ್ದಾರೆ.

ಶಿಕ್ಷಕರು

ಬಹುತೇಕ ಅಂಗನವಾಡಿ ಶಿಕ್ಷಕಿಯರು ಕಷ್ಟಕರ ಪರಿಸ್ಥಿತಿಯಲ್ಲಿಯೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕಲಿಕಾ ಅನುಭವಕ್ಕೆ ಶಿಕ್ಷಕರು ಅವಿಭಾಜ್ಯ ಅಂಗವಾಗಿದ್ದು, ಅವರಿಗೆ ನಮ್ಮ ವಿಶ್ವಾಸ ಮತ್ತು ಬೆಂಬಲದ ಅಗತ್ಯವಿರುತ್ತದೆ. ಶಾಲಾ ಅಧ್ಯಾಪಕರ ಕೆಲಸದಷ್ಟೇ ಸಂಕೀರ್ಣವಾಗಿರುವ ಅಂಗನವಾಡಿ ಶಿಕ್ಷಕಿಯರ ಕೆಲಸವನ್ನು ಗುರುತಿಸಬೇಕಾದ ಅವಶ್ಯಕತೆ ಇದೆ. ಹೊಸ ಶಿಕ್ಷಕಿಯರಿಗೆ ವೃತ್ತಿಪರ ವಿದ್ಯಾರ್ಹತೆ ಬೇಕಾಗಿದ್ದರೆ, ಈಗಾಗಲೇ ಸೇವೆ ಸಲ್ಲಿಸುತ್ತಿರುವವರು ಇನ್ನೂ ಉತ್ತಮ ಬೋಧಕರಾಗಲು ಕಾಲ ಕಾಲಕ್ಕೆ ಉತ್ತಮ ಶಿಕ್ಷಣ ತಜ್ಞರಿಂದ ತರಬೇತಿ ಕೊಡಬೇಕಾಗುತ್ತದೆ.

ಕುಟುಂಬ

ಒಂದು ಮಗುವಿನ ಕಲಿಕೆ ಮತ್ತು ಬೆಳವಣಿಗೆಯ ವ್ಯವಸ್ಥೆಯಲ್ಲಿ ಕುಟುಂಬವೂ ಅತಿ ಮುಖ್ಯ ಅಂಗ ಎಂದು ಗುರುತಿಸ–ಬೇಕಾಗುತ್ತದೆ. ಹಾಗಾಗಿ, ಅಂಗನವಾಡಿ, ಪೋಷಕರು ಮತ್ತು ಸಮಾಜದ ನಡುವೆ ಸೌಹಾರ್ದ ಸಂಬಂಧ ಹಾಗೂ ಪರಸ್ಪರ ನಂಟನ್ನು ಬೆಸೆಯುವುದು ಅತ್ಯವಶ್ಯ.

ಅಂಗನವಾಡಿ ಕೇಂದ್ರಕ್ಕೆ ಹೋಗದೆ ಇರುವ ಮಕ್ಕಳು ಸಮಾಜದಲ್ಲಿ ಸಾಕಷ್ಟಿದ್ದಾರೆ ಎಂಬುದನ್ನು ಅನಿತಾ ಟೀಚರ್ ಗಮನಿಸಿದ್ದರು. ಅವರು ಆರಂಭಿಕ ಬಾಲ್ಯ ಕಾಳಜಿ ಮತ್ತು ಶಿಕ್ಷಣ ದಿನಾಚರಣೆಗೆ (Early Childhood Care and Education Day – ಪೋಷಕರು – ಶಿಕ್ಷಕರ ಸಭೆ) ಪೋಷಕರನ್ನು ಮತ್ತು ಸಮುದಾಯದ ಸದಸ್ಯರನ್ನು ಆಹ್ವಾನಿಸಿ ಅಂಗನವಾಡಿ ಕೇಂದ್ರಗಳಲ್ಲಿ ಕೈಗೊಳ್ಳುವ ನಿತ್ಯ ಚಟುವಟಿಕೆಗಳ ಬಗ್ಗೆ ಹಾಗೂ ಮಕ್ಕಳ ಬೆಳವಣಿಗೆಯ ಮೇಲೆ ಅದು ಬೀರುವ ಪರಿಣಾಮದ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾರಂಭಿಸಿದರು. ಸಭೆಗೆ ಗೈರುಹಾಜರಾದವರ ಮನೆಗಳಿಗೂ ಅವರು ಭೇಟಿ ನೀಡಿ ಶಾಲಾಪೂರ್ವ ಶಿಕ್ಷಣದ ಮಹತ್ವವನ್ನು ವಿವರಿಸಿದರು. ಅಂಗನವಾಡಿಗಳೆಂದರೆ 'ಆಹಾರ ವಿತರಣಾ ಸ್ಥಳ' ಎಂಬ ದೃಷ್ಟಿಕೋನವನ್ನು ಹೋಗಲಾಡಿಸಿ 'ಮಕ್ಕಳ ಸಾಮರ್ಥ್ಯವನ್ನು ಹೆಚ್ಚಿಸುವ ಸ್ಪಂದನಶೀಲ ಕಲಿಕಾ ಕೇಂದ್ರಗಳು' ಎಂಬ ಭಾವನೆ ಬರುವಂತೆ ಮಾಡಲು ಅವರಿಗೆ ಆರು ತಿಂಗಳೇ ಬೇಕಾಯಿತು. ಮಕ್ಕಳ ದಾಖಲಾತಿಯನ್ನು 25ರಿಂದ 40ಕ್ಕೆ ಹೆಚ್ಚಿಸಲು ಕೂಡಾ ಅನಿತಾ ಟೀಚರ್‌ಗೆ ಇದು ನೆರವಾಯಿತು.





ಉಲ್ಲೇಖಗಳು

Early Childhood Education Initiative Sangareddy. (2017). *Anganwadi Teachers Development Tracking.* Sangareddy. Azim Premji Foundation. Unpublished.

Early Childhood Education Initiative Sangareddy. (2018). *Anganwadi Teachers Capacity Development Model for Impactful Early Learning.* Sangareddy. Azim Premji Foundation. Unpublished.

Ministry of Women and Child Development. (2016). *Anganwadi Centres,* 2013. Delhi. Government of India.

* ಮಕ್ಕಳ ಗುರುತನ್ನು ಮರೆಮಾಚಲು ಹೆಸರುಗಳನ್ನು ಬದಲಾಯಿಸಲಾಗಿದೆ.

ಇಸಿಇ ತಂಡ (ಸಂಗಾರೆಡ್ಡಿ)

ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಆರಂಭಿಕ ಬಾಲ್ಯ ಶಿಕ್ಷಣ (ಇಸಿಇ) ಉಪಕ್ರಮವು ಶಿಕ್ಷಕರು ಸಾಮರ್ಥ್ಯಾಭಿವೃದ್ಧಿಯ ಮೇಲೆ ಗಮನ ಹರಿಸುವ ಮೂಲಕ ಅವರು ಚಿಂತನಶೀಲ ಅಭ್ಯಾಸಿಗರಾಗಿ ವಿಕಸಿತರಾಗಿ, ಈ ಮೂಲಕ ಅಂಗನವಾಡಿ ಕೇಂದ್ರಗಳನ್ನು 3ರಿಂದ 6ರ ವಯೋಮಾನದ ಮಕ್ಕಳ ಸಮಗ್ರ ಬೆಳವಣಿಗೆಯ ದೃಷ್ಟಿಯಲ್ಲಿ ಸ್ಪಂದನಶೀಲ ಕಲಿಕಾ ಕೇಂದ್ರಗಳಾಗಿ ಮಾರ್ಪಡಿಸುವುದು ಅದರ ಗುರಿಯಾಗಿದೆ.

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**